# ಪ್ರಬಂಧ

ಬಾಹುಬಲಿ ಪದತಳದಲ್ಲಿ ಕೆತ್ತಿಸಿದಂತೆ ಹೊಲಿದು ಅಧಿಕೃತತೆಯನ್ನು ಮಾಡಿಕೊಟ್ಟಳು. ಇದು ನಮ್ಮ ಧರ್ಮಸಂಕಟಕ್ಕೆ ಕಾರಣವಾಯಿತು. ನಾವು ಎಲ್ಲಿ ಹೋದರೂ ನಾವು ಕಾಣೆಯಾದರೂ ಪರವಾಗಿಲ್ಲ, ನಮ್ಮ ಛತ್ರಿ ಮಾತ್ರ ನಮ್ಮೊಂದಿಗೆ ಇರಬೇಕೆಂಬ ರಕ್ಷಣಾವ್ಯೂಹವನ್ನು ನಮಗೆ ನಾವೇ ನಮಗೆ ಬೇಕಾದ ರೀತಿಯಲ್ಲಿ ರೂಪಿಸಿಕೊಂಡೆವು. ಕೈಯಲ್ಲಿ ಪುಸ್ತಕಗಳನ್ನು ಎದೆಗಾನಿಸಿ ಹೋಗುವುದನ್ನು ಬಿಟ್ಟು ಒಂದು ಬ್ಯಾಗನ್ನು ಖರೀದಿಸಿ, ಅದರಲ್ಲಿ ಒಂದು ಪ್ಲಾಸ್ಟಿಕ್ ಚೀಲ ಹಾಕಿ ಅದರಲ್ಲಿ ಈ ಛತ್ರಿಯನ್ನು ಭಾರತ ಸರ್ಕಾರ ಸ್ವಿಸ್ ಬ್ಯಾಂಕ್‌ನಲ್ಲಿ ಭದ್ರ ಮಾಡುವಂತೆ ಮಾಡಿಕೊಳ್ಳಲಾರಂಭಿಸಿದೆ. ಇದಲ್ಲದೆ ನನ್ನ ಗೆಳತಿಯರಿಗೆ ಕಾಲೇಜಿನಿಂದ ಹೊರಡುವ ಮುಂಚೆ ನನ್ನ ಕೈಯಲ್ಲಿ ಛತ್ರಿ ಇದೆಯಾ ಎಂಬುವುದನ್ನು ಪರೀಕ್ಷೆ ಮಾಡಿ ಎಂದೂ ಅವರಿಗೆ ಹೇಳಿ ಇಟ್ಟಿದ್ದೆ. ಕೆಲವು ದಿನ ಅದನ್ನು ಚಾಚೂ ತಪ್ಪದೇ ಪಾಲಿಸಿದೆ ಕೂಡ. ಅದು ಕೆಲವೇ ದಿನ ಮಾತ್ರ. ನಾನು ಕಾಲೇಜಿನಿಂದ ಹೊರಟ ದಿಬ್ಬಣ ಎಂ.ಜಿ ರೋಡ್, ಕೆ.ಜಿ ರೋಡಿಗೋ ಏನನ್ನಾದರೂ ತಿನ್ನಲು ಬರುತ್ತಿದ್ದಂತೆ ಪಾನಿಪುರಿ ಅಂಗಡಿಯಲ್ಲೋ, ಸಿನಿಮಾ ಥಿಯೇಟರ್‌ನಲ್ಲೋ ನನ್ನ ಛತ್ರಿ ಮಾಯಾ ಬಜಾರಿನ ಚಿತ್ರದಲ್ಲಿ ಮಾಯವಾಗುವಂತೆ ಮಾಯವಾಗುತ್ತಿತ್ತು. ಮನೆಗೆ ಕಾಲಿಡುವ ಮುಂಚೆ ಛತ್ರಿ ಇಲ್ಲ ಎಂಬುದು ಗೊತ್ತಾಗುತ್ತಿದ್ದಂತೆ ಹೊಟ್ಟೆ ನೋವೋ ಅಥವಾ ತಲೆನೋವಿನ ಉಪಾಯವನ್ನು ಮೈಗೆ ಆವಾಹಿಸಿಕೊಂಡು ಮನೆ ಸೇರಿ ಏನೂ ಗೊತ್ತಿಲ್ಲದಂತೆ ಮಲಗಿಬಿಡುತ್ತಿದ್ದೆ. ಮೊದಮೊದಲು ಉಪಚರಿಸಿ ನಿಜವೆಂದು ನಂಬುತ್ತಿದ್ದ ಅಮ್ಮ, ಯಾವತ್ತೂ ಛತ್ರಿ ಇಲ್ಲವೋ ಆ ದಿನವೇ ಈ ನಾಟಕ ಪ್ರಾರಂಭವಾಗಿದೆ ಎಂಬುದನ್ನು ಸಿಬಿಐ ತರಹ ಕಂಡುಹಿಡಿದು ಬಿಡುತ್ತಿದ್ದಳು. ನಂತರ ನಮಗೆ ಬೈಗುಳದ ಭಂಡಾರವೇ ಸಿದ್ಧವಾಗಿರುತ್ತಿತ್ತು. ಅವಳು ಬೈಯುವುದು ಬಿಟ್ಟರೆ ಹೊಡೆಯಲು ಸಾಧ್ಯವಿಲ್ಲದಷ್ಟು ನಾವು ದೊಡ್ಡವರಾಗಿದ್ದೆವು. ಹಾಗಾಗಿ ಒಂದಷ್ಟು ಹೊತ್ತು ಆಕೆಯ ಮಂತ್ರಾಕ್ಷತೆಯನ್ನು ಕೇಳಿಸಿಕೊಳ್ಳಲೇ ಬೇಕಿತ್ತು. 'ಉಪ್ಪು ತಿಂದವನು ನೀರು ಕುಡಿಯಲೇ ಬೇಕಲ್ಲವೇ?'

ಈ ಛತ್ರಿಗಳಿಗಾಗಿ ಹಣ ಸುರಿಯುವುದು ಸಾಧ್ಯವಿಲ್ಲ ಎಂದು ನಿರ್ಧರಿಸಿದ ಮಾತೃಶ್ರೀ, ನಮ್ಮೆಲ್ಲರಿಗೂ ರೈನ್ ಕೋಟನ್ನು ತರಲು ನಿರ್ಧರಿಸಿದಳು. ಸಾಂಘಿಕವಾಗಿ ರೈನ್ ಕೋಟ್ ಹಾಕಲು ನಾವೇನು ಪುಟ್ಟ ಮಕ್ಕಳಾ? ಎಂದು ಪ್ರತಿಭಟಿಸಿದೆವು. ನಾನು ಮಾತ್ರ ನನಗೆ ರೈನ್ ಕೋಟ್ ಬೇಡವೇ ಬೇಡ ಎಂದು ಹಟ ಹಿಡಿದು ಕೂತೆ. ಅಮ್ಮ ಪದೇಪದೇ ಏಕೆಂದು ಪ್ರಶ್ನೆ ಹಾಕಿದಳು. ನಾನು ನನಗೆ ಅದು ಇಷ್ಟವಿಲ್ಲ ಎಂಬ ಉತ್ತರ ನೀಡಿದೆ. ಈ ವಾದ ವಿವಾದ ಕೊನೆಗೊಳ್ಳದ ಸ್ಥಿತಿ ಬಂದಾಗ ಅಮ್ಮ ಗಟ್ಟಿಸಿ ಇನ್ನುಂದೆ ಛತ್ರಿ ಕಳೆದರೆ ನೀನೇ ದುಡ್ಡು ಕೊಟ್ಟು ತರಬೇಕು ಎಂದು ಫರ್ಮಾನು ಹೊರಡಿಸಿದಳು. ಆಗ ಬಣ್ಣದ ಒಂದು ಛತ್ರಿಗೆ 110ರಿಂದ 250 ರೂಪಾಯಿ ತನಕ ಕೊಡಬೇಕಿತ್ತು. ನಾನಿನ್ನು ವಿದ್ಯಾರ್ಥಿ. ಆ ಕಾಲಕ್ಕೆ ನಮಗೆ ಪಾಕೆಟ್‌ಮನಿ ಕಲ್ಪನೆ ಕೂಡ ಇರಲಿಲ್ಲ. ಪುಟ್ಟವರಾಗಿದ್ದಾಗ ಊರಿಂದ ನೆಂಟರು ಬಂದು ಹೋಗುವಾಗ ಐವತ್ತೋ, ನೂರು ರೂಪಾಯಿ ಕೈಗಿಡುತ್ತಿದ್ದರು. ಕಾಲೇಜು ಓದುವ ನಮಗೆ ಯಾವ ನೆಂಟರೂ ದುಡ್ಡು ಕೊಡುತ್ತಿರಲಿಲ್ಲ.

ನಾನು ಛತ್ರಿಯ ಆಸೆ ಬಿಟ್ಟು ರೈನ್ ಕೋಟ್ ಧರಿಸಲೇಬೇಕಾದ ಸ್ಥಿತಿಗೆ ಮುಖಾಮುಖಿಯಾದೆ. ಆದರೆ ನನ್ನ ಆತ್ಮ ರೈನ್ ಕೋಟ್ ಧರಿಸಲು ಒಪ್ಪಲಿಲ್ಲ. ಅದಕ್ಕೆ ಬಹುಮುಖ್ಯ ಕಾರಣ ಕಾಲೇಜಿಗಾಗಿ ತೆಗೆದು ಕೊಂಡ ಹೊಸಹೊಸ ಚೂಡಿದಾರ್‌ಗಳು, ಲಂಗಾ ಬ್ಲೌಸ್‌ಗಳು, ಲಂಗ ದಾವಣಿಗಳು. ಅಪರೂಪಕ್ಕೊಮ್ಮೆ ಧರಿಸುವ ಸೀರೆ ಇವೆಲ್ಲವನ್ನು ಧರಿಸಿ ವಯ್ಯಾರವಾಗಿ ನಮ್ಮ ಮನೆ ಇದ್ದ ಬಾರ್ ಲೈನಿನಿಂದ ನಮ್ಮ ರಥ ಎಂ.ಜಿ. ರೋಡ್ ದಾಟಿ ಎಸ್.ಟಿ.ಜೆ. ವುಮೆನ್ಸ್ ಕಾಲೇಜಿಗೆ ತಲುಪುವವರೆಗೆ ಅನೇಕ ಹರೆಯದ ಹುಡುಗರ ಹಾರ್ಟ್‌ಬೀಟನ್ನು ಹೆಚ್ಚಿಸುತ್ತಿದ್ದೇವೆ ಎಂಬ ಭ್ರಮೆಯಲ್ಲಿದ್ದೆವು. ಅಂಥದ್ರಲ್ಲಿ ಮಳೆಗಾಗಿ ಗೋಣಿಚೀಲದಂತಿದ್ದ ರೈನ್ ಕೋಟನ್ನು ಧರಿಸುವುದಾದರೂ ಹೇಗೆ? ಹರೆಯ ದಾಟಿ ಮಧ್ಯ ವಯಸ್ಸಿನ ಕೊನೆಯಲ್ಲಿ ನಿಂತಿರುವ ನನ್ನಮ್ಮನಿಗೆ ಇದು ಅರ್ಥವಾಗುವುದಾದರೂ ಹೇಗೆ? ಇದನ್ನು ಅರ್ಥ ಮಾಡಿಸುವುದಾದರೂ ಹೇಗೆ? ನನ್ನ ಹಟಕ್ಕೆ ಅಮ್ಮನಿಗೆ ಕಾರಣ ಗೊತ್ತಾಗಿದ್ದರೆ, 'ಹೆಣ್ಣೆಂದರೆ ಹುಣ್ಣು, ಬೆಳೆದ ಹೆಣ್ಣು ಸೆರಗಿಗೆ ಸಿಕ್ಕಿಸಿಕೊಂಡ